## ಬೆಂಗಳೂರಿನಲ್ಲಿ ಐ.ಸಿ.ಎಸ್.ಡಬ್ಲ್ಯೂ ಹಾಸ್ಟೆಲ್ ಮುಚ್ಚಿರುವುದು

1740 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರಿನಲ್ಲಿ ಐಸಿಎಸ್‌ಡಬ್ಲ್ಯೂ ಹಾಸ್ಟೆಲ್ ಮುಚ್ಚಲು ಕಾರಣವೇನು?*

ಆ) *ಈ ಮೊದಲು ಉದ್ಯೋಗಕ್ಕೆ ಹೋಗುತ್ತಿದ್ದ ಮಹಿಳೆಯರಿಗೆ ಆ ಹಾಸ್ಟೆಲ್‌ನಲ್ಲಿ ಎಷ್ಟು ಅವಕಾಶವಿತ್ತು, ಅದನ್ನು ಸರ್ಕಾರಕ್ಕೆ ಮಾರುವ ಉದ್ದೇಶ ಇದೆಯೇ?*

ಇ) *ಈ ಹಾಸ್ಟೆಲ್ ಮುಚ್ಚಿರುವುದರಿಂದ ಬಹಳಷ್ಟು ಉದ್ಯೋಗಸ್ಥ ಮಹಿಳೆಯರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು (ವಿವರ ಒದಗಿಸುವುದು)*

ಶ್ರೀಮತಿ ವಿಮಲಾಬಾಯಿ ಜಗದೇವ್‌ರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ಐಸಿಎಸ್‌ಡಬ್ಲ್ಯೂ ಸಂಸ್ಥೆಯು ವಸತಿ ನಿಲಯದ ಕಟ್ಟಡವನ್ನು ಸೂಕ್ತ ರೀತಿಯಲ್ಲಿ ನಿರ್ಮಿಸದ ಕಾರಣ, ಹಾಸ್ಟಲ್ ಉಪಯೋಗಕ್ಕೆ ಯೋಗ್ಯವಿರುವುದಿಲ್ಲ. ಸದರಿ ಹಾಸ್ಟಲನ್ನು ದುರಸ್ತಿ ಮಾಡಿ ಪ್ರಾರಂಭಿಸಲು ಐಸಿಎಸ್‌ಡಬ್ಲ್ಯೂ ಸಂಸ್ಥೆಯು ವಿಫಲವಾಗಿರುವುದರಿಂದ, ಇದನ್ನು ಮುಚ್ಚಲಾಗಿದೆ.

ಆ) ಈ ವಸತಿ ನಿಲಯದಲ್ಲಿ 300 ಮಹಿಳೆಯರಿಗೆ ಅವಕಾಶವಿತ್ತು. ವಸತಿ ನಿಲಯವು ಐಸಿಎಸ್‌ಡಬ್ಲ್ಯೂ ಸಂಸ್ಥೆಯ ವಶದಲ್ಲಿದ್ದು ಸರ್ಕಾರಕ್ಕೆ ಸದರಿ ಕಟ್ಟಡವನ್ನು ಮಾರುವ ಉದ್ದೇಶ ಇರುವುದಿಲ್ಲ.

ಇ) ಉದ್ಯೋಗಸ್ಥ ಮಹಿಳೆಯರಿಗೆ ತೊಂದರೆ ಆಗಿರುವ ಬಗ್ಗೆ ಸರ್ಕಾರಕ್ಕೆ ಯಾವುದೇ ದೂರುಗಳು ಬಂದಿಲ್ಲ. ಉದ್ಯೋಗಸ್ಥ ಮಹಿಳೆಯರು ಬೇರೆ ವಸತಿ ನಿಲಯಗಳ ಪ್ರಯೋಜನ ಪಡೆಯುತ್ತಿದ್ದಾರೆ.

## ಸೋಮವಾರಪೇಟೆ ತಾಲ್ಲೂಕಿನಲ್ಲಿ ಅನಧಿಕೃತ ಮನೆ ನಿರ್ಮಾಣ

1741 -ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸೋಮವಾರಪೇಟೆ ತಾಲ್ಲೂಕು ಹಾರಂಗಿ ಆಸ್ತಿ ಮುಳುಗಡೆಯಾದ ನಲವತ್ತು ಜನರು ಮಾವಿನಳ ಗ್ರಾಮದಲ್ಲಿ ಅನಧಿಕೃತವಾಗಿ ಕಳೆದ ನಲವತ್ತು ವರ್ಷದಿಂದ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದರೂ ಕೂಡ ಅವರಿಗೆ ಪಟ್ಟ ವಿತರಣೆ ಮಾಡದಿರಲು ಕಾರಣವೇನು? ಯಾವಾಗ ವಿತರಣೆ ಮಾಡಲಾಗುವುದು (ವಿವರ ಒದಗಿಸುವುದು)*